ಶ್ರೀ ಸಿದ್ದರಾಮಯ್ಯ : ನಿರ್ಣಯ ಮಾಡುವುದಕ್ಕೆ ಈ ಸಭೆಗೆ ಅಧಿಕಾರವಿಲ್ಲವೆ? ಸ್ಪೀಕರ್‌ಗೆ ಈ ಪ್ರಾವಿಜನ್‌ಗಳನ್ನೇ ಸಸ್‌ಪೆಂಡ್ ಮಾಡುವ ಅಧಿಕಾರವಿದೆ.

ಶ್ರೀ ಹೆಚ್.ಡಿ. ರೇವಣ್ಣ : ರಾಜೀವ್‌ಗಾಂಧಿ ತೀರಿ ಹೋದಾಗ ಪಾರ್ಲಿಮೆಂಟ್ ಎಲೆಕ್ಷನ್ ಮುಂದೆ ಹೋಗಲಿಲ್ಲವೆ?

SRI SIDDARAMAIAH : In a situation like this, when the rules are framed, nobody has anticipated that such a situation will arise. Any rule can be suspended by the House, by the Speraker, by your goodself such being the case, ಅವರು ಈ ತರಹ technical objection ತೆಗೆದಿಕೊಂಡು, ನಾವು ಎಲ್ಲರೂ ಒಳ್ಳೆಯ ಮನಸ್ಸಿನಿಂದ ಡಾ: ವಿಷ್ಣುವರ್ಧನ್‌ರವರಿಗೆ ಗೌರವ ಸೂಚಿಸಬೇಕು ಎನ್ನುವುದಾದರೆ, ರಾಜ್ಯ ಗೌರವ ಸೂಚಿಸಬೇಕು, ಸರ್ಕಾರ ಗೌರವ ಸೂಚಿಸಬೇಕು, ಸದನ ಗೌರವ ಸೂಚಿಸಬೇಕು ಎನ್ನುವುದಾದರೆ, ಯಾವುದೇ ರೀತಿಯಲ್ಲಿ ಇದನ್ನು ತೀರಾ ಚರ್ಚೆಗೆ ಎಳೆಯುವುದಕ್ಕೆ ಹೋಗಬೇಡಿ. ಇದರಲ್ಲಿ ರಾಜಕೀಯ ಮಾಡುವ ಉದ್ದೇಶ ನಮಗಿಲ್ಲ. ನಿಮಗೆ ಗೊತ್ತಾಯಿತು, If you are not serious, ನೀವು ಏಕೆ ವಿಷ್ಣುರವರ ಶ್ರದ್ಧಾಂಜಲಿ ಅರ್ಪಿಸಲು ಸಂತಾಪ ಸೂಚನೆ ತರುತ್ತೀರಿ? ಹಾಗಾದರೆ ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್ : ಇಲ್ಲಿಯವರೆಗೆ ಸಂತಾಪ ಸೂಚನೆ ಮಾಡಿದ್ದು ಬರಿ ಕಣ್ಣೀರು ಆಗುತ್ತದೆ. ಕಲಾವಿದರಿಗೆ ಅಗೌರವ ತೋರಿಸಿದ ಹಾಗೆ ಆಗುತ್ತದೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಒಬ್ಬ ಹಿರಿಯ ಕಲಾವಿದನಿಗೆ ಗೌರವ ಸೂಚಿಸುವ ಔದಾರ್ಯ ಸರ್ಕಾರಕ್ಕೆ ಇಲ್ಲವೆ?

(ಗೊಂದಲ)

3. ಅಧ್ಯಕ್ಷರ ಚುನಾವಣೆ :

ವಿಷಯ : ಶ್ರೀ ಕೆ.ಜಿ. ಬೋಪಯ್ಯನವರನ್ನು ವಿಧಾನಸಭಾ ಅಧ್ಯಕ್ಷರನ್ನಾಗಿ ಚುನಾಯಿಸುವ ಬಗ್ಗೆ.

ಛೇರ್ಮನ್ : ಈ ದಿನದ ಕಾರ್ಯಕಲಾಪಗಳ ಪಟ್ಟಿಯಲ್ಲಿನ ಪ್ರಶ್ನೋತ್ತರ ಇತ್ಯಾದಿಗಳನ್ನು ಬದಿಗೊತ್ತಿ, ಸಭಾಧ್ಯಕ್ಷರ ಚುನಾವಣೆಯನ್ನು ಘನತೆವೆತ್ತ

ರಾಜ್ಯಪಾಲರು ನಿಗದಿಪಡಿಸಿರುವುದರಿಂದ ಸದರಿ ಕಾರ್ಯಕಲಾಪವನ್ನು ನಡೆಸುತ್ತೇನೆ.

ಅಧ್ಯಕ್ಷರ ಸ್ಥಾನಕ್ಕೆ ಇಬ್ಬರ ಹೆಸರುಗಳನ್ನು ಸೂಚಿಸುವ ನಾಲ್ಕು ಪ್ರಸ್ತಾವಗಳಿವೆ, ಕಾರ್ಯಕ್ರಮ ಪಟ್ಟಿಯಲ್ಲಿ ಸೂಚಿಸಲಾದ ಕ್ರಮದಲ್ಲಿಯೇ ಅವರ ಹೆಸರಿನಲ್ಲಿರತಕ್ಕಂಥ ಪ್ರಸ್ತಾವಗಳನ್ನು ಸೂಚಿಸಲು ಸೂಚಕರ ಹೆಸರುಗಳನ್ನು ಕರೆಯುತ್ತೇನೆ. ಎಲ್ಲಾ ಪ್ರಸ್ತಾವಗಳನ್ನು ಸೂಚಿಸಿದ ನಂತರ ಅವುಗಳನ್ನು ಒಂದಾದ ನಂತರ ಒಂದರಂತೆ ಮತಕ್ಕೆ ಹಾಕುತ್ತೇನೆ. ಯಾವುದಾದರೊಂದು ಪ್ರಸ್ತಾವವನ್ನು ಸಭೆಯು ಅಂಗೀಕರಿಸಿದಲ್ಲಿ ಇತರ ಪ್ರಸ್ತಾವಗಳನ್ನು ಸಭೆಯ ಮತಕ್ಕೆ ಹಾಕಲಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರ ಚುನಾವಣೆ

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಮಾನ್ಯ ಸಭಾಧ್ಯಕ್ಷರ ಪೀಠದ ಮುಂದೆ ಘೋಷಣೆ ಕೂಗುತ್ತಾ ಸಭಾಧ್ಯಕ್ಷರ ಮುಂದೆ ಇರುವ ಮೈಕ್‌ಗಳನ್ನು ಕಿತ್ತು ಹಾಕಿ ಚುನಾವಣಾ ಪ್ರಕ್ರಿಯೆಗೆ ಅಡ್ಡಿಪಡಿಸುತ್ತಿದ್ದರು)

ಛೇರ್ಮನ್ : ಮಾನ್ಯ ಮುಖ್ಯಮಂತ್ರಿಗಳು ಚುನಾವಣಾ ಪ್ರಸ್ತಾವವನ್ನು ಮಂಡಿಸುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಶ್ರೀ ಕೆ.ಜಿ.ಬೋಪಯ್ಯರವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಸೂಚಿಸಿರುವ ಈ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಶ್ರೀ ಕೆ.ಜಿ.ಬೋಪಯ್ಯನವರನ್ನು ವಿಧಾನ ಸಭೆಯ ಸಭಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಸಚಿವರು ಸೂಚಿಸಿರುವ ಪ್ರಸ್ತಾವವನ್ನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಛೇರ್ಮನ್ : ಈಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಪ್ರಸ್ತಾವವನ್ನು ಮಂಡಿಸುವುದು.

(ಚುನಾವಣಾ ಪ್ರಸ್ತಾವವನ್ನು ಮಂಡಿಸಿರುವುದಿಲ್ಲ)

ಛೇರ್ಮನ್ : ಈಗ ಶ್ರೀ ಹೆಚ್.ಡಿ.ರೇವಣ್ಣನವರು ಪ್ರಸ್ತಾವವನ್ನು ಮಂಡಿಸುವುದು.

(ಚುನಾವಣಾ ಪ್ರಸ್ತಾವವನ್ನು ಮಂಡಿಸಿರುವುದಿಲ್ಲ)

ಛೇರ್ಮನ್ : ಮಾನ್ಯ ಮುಖ್ಯಮಂತ್ರಿಯಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸೂಚಿಸಿರುವ ಹಾಗೂ ಮಾನ್ಯ ಇಂಧನ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

ಶ್ರೀ ಕೆ. ಜಿ. ಬೋಪಯ್ಯನವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದು.

"ಪ್ರಸ್ತಾವ ಧ್ವನಿಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಶ್ರೀ ಕೆ.ಜಿ.ಬೋಪಯ್ಯ ರವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು."

ಛೇರ್ಮನ್ : ನೂತನ ಸಭಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಕೆ.ಜಿ.ಬೋಪಯ್ಯ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಈಗ ಮಾನ್ಯ ಸಭಾ ನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀ ಕೆ.ಜಿ.ಬೋಪಯ್ಯ ಅವರನ್ನು ಈ ಸ್ಥಾನಕ್ಕೆ ಕರೆದುಕೊಂಡು ಬರಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಸಭಾನಾಯಕರು, ಕಾನೂನು ಮತ್ತು ಸಂಸದೀಯ ಸಚಿವರು, ಇಂಧನ ಸಚಿವರು, ಸಾರಿಗೆ ಸಚಿವರು, ಉನ್ನತ ಶಿಕ್ಷಣ ಸಚಿವರು ಮತ್ತು ವಸತಿ ಸಚಿವರು ಶ್ರೀ ಕೆ. ಜಿ. ಬೋಪಯ್ಯರವರನ್ನು ಅಧ್ಯಕ್ಷ ಪೀಠಕ್ಕೆ ಕರೆ ತಂದರು.)

ಶ್ರೀ ಕೆ. ಜಿ. ಬೋಪಯ್ಯರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಕೆ.ಜಿ.ಬೋಪಯ್ಯರವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಇವತ್ತು ಈ ಸದನ ಆಯ್ಕೆಮಾಡಿದೆ. ಪ್ರಜಾತಂತ್ರ ವ್ಯವಸ್ಥೆಯನ್ನೆ ಅಪಮಾನ ಮಾಡುವಂಥ ಕೆಲಸವನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಸದಸ್ಯರು ಮಾಡಿದ್ದಾರೆ. ಸದನದ ಬಾವಿಯೊಳಗೆ ಬಂದಿರುವ ಸದಸ್ಯರ ಸರ್ವಾಧಿಕಾರಿ ಹಾಗೂ ಗೂಂಡಾಗಿರಿ ಧೋರಣೆಯನ್ನು ಖಂಡಿಸುತ್ತೇನೆ. ಮಾನ್ಯ ಸಭಾಧ್ಯಕ್ಷರು ಈ ಸ್ಥಾನದಲ್ಲಿ ಕುಳಿತು ಹಿರಿಯರು ಹಾಕಿ ಕೊಟ್ಟ ಸಂಪ್ರದಾಯವನ್ನು ನಡೆಸಿಕೊಂಡು ಹೋಗಬೇಕೆಂದು ಕೋರುತ್ತೇನೆ.

(ಗೊಂದಲ)

ಅಧ್ಯಕ್ಷರು : ನನ್ನನ್ನು ಆಯ್ಕೆ ಮಾಡಿದಂಥ ಸದನಕ್ಕೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

(ಗೊಂದಲ)

(ಸದನದ ಬಾವಿಗಳಲ್ಲಿ ವಿರೋಧ ಪಕ್ಷದ ಸದಸ್ಯರುಗಳು ದಿಕ್ಕಾರ ಕೂಗುತ್ತಿದ್ದರು)

ಅಧ್ಯಕ್ಷರು : ಈಗ ಸದನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 12 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಳಿಸಿ ಅನಿರ್ದಿಷ್ಟ ಅವಧಿಗೆ ಮುಂದೂಡಲಾಯಿತು)

* * *